# ಆನ್‌ಲೈನ್‌ನಲ್ಲೇ ಪರೀಕ್ಷೆ ಮುಗಿಸಿದ ಆಕ್ಸ್‌ಫರ್ಡ್

## ಪಠ್ಯ ಬೋಧನೆ, ಪರೀಕ್ಷೆ ಜತೆಗೆ ಮೌಲ್ಯಮಾಪನ ಸಹ ಪೂರ್ಣಗೊಳಿಸಿದ ಕಾಲೇಜು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಸೋಂಕು ಬಿಗಡಾಯಿಸುತ್ತಿರುವ ನಡುವೆ ಶಾಲಾ-ಕಾಲೇಜುಗಳಲ್ಲಿ ಬಾಕಿ ಪಠ್ಯ ಬೋಧನೆ ಹಾಗೂ ಪರೀಕ್ಷೆ ನಡೆಸುವುದು ಹೇಗೆ ಎಂದು ತೀವ್ರ ಚರ್ಚೆಯಾಗುತ್ತಿರುವ ನಡುವೆಯೇ ನಗರದ ಪದವಿ ಕಾಲೇಜೊಂದು ಆನ್‌ಲೈನ್‌ನಲ್ಲೇ ಬಾಕಿ ಪಠ್ಯ ಬೋಧನೆ ಹಾಗೂ ಪರೀಕ್ಷೆ ಎರಡನ್ನೂ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗಿದೆ.



ಬೆಂಗಳೂರು ವಿಶ್ವವಿದ್ಯಾಯದ ಸಂಯೋಜನೆ ಪಡೆದಿರುವ ಎಚ್‌ಎಸ್‌ಆರ್ ಲೇಔಟ್‌ನ ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜು ತನ್ನ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲೇ ಪಠ್ಯ ಬೋಧನೆ ಯಶಸ್ವಿಯಾಗಿ ಮುಗಿಸಿ, ಪರೀಕ್ಷೆಯನ್ನೂ ನಡೆಸಿದೆ. ಇದರ ಬೆನ್ನಲ್ಲೇ ಮೌಲ್ಯಮಾಪನ ಕಾರ್ಯವನ್ನೂ ಪೂರ್ಣಗೊಳಿಸಿರುವುದಾಗಿ ತಿಳಿಸಿದೆ.

ಆನ್‌ಲೈನ್ ತರಗತಿಗಳನ್ನು ನಡೆಸುವುದು ಸುಲಭವಾಗಿತ್ತಾದರೂ ಪರೀಕ್ಷೆ ಕಷ್ಟವಾಗಿತ್ತು. ಆದರೆ, ಕ್ಯಾಂಪಸ್ ಟೆಕ್ನಾಲಜಿ ಎಂಬ ಕಂಪನಿ ಪಾಲುದಾರಿಕೆಯಲ್ಲಿ ಆನ್‌ಲೈನ್ ಪರೀಕ್ಷೆಗೆ ತಮ್ಮದೇ ಅಪ್ಲಿಕೇಷನ್ ಅಭಿವೃದ್ಧಿ ಪಡಿಸಲಾಯಿತು. ಕಾಲೇಜಿನ ಪ್ರಾಧ್ಯಾಪಕರು ಸಿದ್ಧಪಡಿಸಿದ ನಿಯಮಿತ ಪ್ರಶ್ನೆಪತ್ರಿಕೆಯನ್ನು ಈ ಅಪ್ಲಿಕೇಷನ್ ಮೂಲಕ ವಿದ್ಯಾರ್ಥಿಗಳ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಯಿತು. ವಿದ್ಯಾರ್ಥಿಗಳು ತಮ್ಮ ಪೋರ್ಟಲ್‌ನಲ್ಲಿ ಲಾಗಿನ್ ಆಗಿ ಉತ್ತರ ಬರೆದಿದ್ದಾರೆ. ನಂತರ ಪ್ರಾಧ್ಯಾಪಕರು ಆನ್‌ಲೈನ್ ಅಪ್ಲಿಕೇಷನ್ ಮೂಲಕ ಉತ್ತರ ಪತ್ರಿಕೆಗಳನ್ನು ತೆರೆದು ಮೌಲ್ಯಮಾಪನ ಮಾಡಿದ್ದಾರೆ ಎಂದು ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನರಸಿಂಹರಾಜು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಪ್ರತಿ ಪ್ರಶ್ನೆಗೂ ಪೇಪರ್‌ನಲ್ಲಿ ಉತ್ತರವನ್ನು ಲಿಖಿತವಾಗಿ ಬರೆದು, ಅಗತ್ಯವಿರುವ ಪ್ರಶ್ನೆಗಳಿಗೆ ರೇಖಾಚಿತ್ರ ಜೊತೆಗೆ ವಿವರಣಾತ್ಮಕ ಉತ್ತರ ಬರೆದು ಅಪ್‌ಲೋಡ್ ಮಾಡಲು ಅಥವಾ ಅಪ್ಲಿಕೇಷನ್‌ನ ಪರದೆಯ ಮೇಲೆ ನೇರವಾಗಿ ಕೀಬೋರ್ಡ್ ಮೂಲಕ ಉತ್ತರ ಬರೆಯಲು ಎರಡು ರೀತಿ ಅವಕಾಶ ಕಲ್ಪಿಸಲಾಗಿತ್ತು. ಅಧ್ಯಾಪಕರು ತಮ್ಮ ಪೋರ್ಟಲ್‌ನಲ್ಲಿ ಲಾಗಿನ್ ಆದಾಗ ಪ್ರತಿ ವಿದ್ಯಾರ್ತಿ ಬರೆದ ಅಥವಾ ಅಪ್‌ಲೋಡ್ ಮಾಡಿದ ಉತ್ತರಗಳು ಲಭ್ಯವಾಗುತ್ತದೆ. ಅದರ ಆಧಾರದ ಮೇಲೆ ಮೌಲ್ಯಮಾಪನ ಮಾಡಿದ್ದಾರೆ. ಹೊಸ ಅಪ್ಲಿಕೇಷನ್‌ನಿಂದಾಗಿ ಮೊಬೈಲ್‌ನಲ್ಲೇ ಪರೀಕ್ಷೆ ಬರೆಯಬಹುದಾಗಿದೆ ಎಂದು ಪ್ರಾಂಶುಪಾಲೆ ಡಾ.ಆರ್.ಕಾವ್ಯಶ್ರೀ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned by CamScanner